ಅಂಶವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಸೌಕಟ್ ಸಂಸ್ಥೆಯೆಂಬುದು ಒಂದು Semi-Official Body ; Adult Education Council ಮತ್ತು ಸೇವಾದಳ—ಇವುಗಳು ಖಾಸಗೀ ಸಂಸ್ಥೆಗಳು. ಅವರವರ ಉದ್ದೇಶಗಳಿಗನುಗುಣವಾಗಿ ಸೇವಾ ಕ್ಷೇತ್ರಗಳನ್ನು ಅವರು ನಿರೂಪಿಸಿಕೊಂಡಿದ್ದಾರೆ. ಅಂಥವರನ್ನು ನಾವು ಹೀಗೆಯೇ ಮಾಡಬೇಕೆಂದು ಹೇಳುವುದಕ್ಕಾಗುತ್ತದೆಯೇ ? ಸರ್ಕಾರಿ ಇಲಾಖೆಗೆ ಹಾಗೆ ಹೇಳಬಹುದೇ ಹೊರತು ಖಾಸಗೀ ಸಂಸ್ಥೆಗಳಿಗೆ ಹೇಳುವುದಕ್ಕಾಗುವುದಿಲ್ಲ. ನಾವು ಅವರಿಗೆ ಈ ಉದ್ದೇಶದಿಂದ ಕೆಲಸಮಾಡಿ ಎಂದರೆ ಅವರ ಉದ್ದೇಶಕ್ಕೆ ಭಂಗ ತಂದಂತಾಗುತ್ತದೆ. ಆದ್ದರಿಂದ ಸ್ವಾಭಾವಿಕವಾಗಿಯೇ ನಮ್ಮ ಅಭಿಪ್ರಾಯಗಳನ್ನು ಅವರ ಮೇಲೆ ಹೊರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಎರಡನೆಯದಾಗಿ ಅವುಗಳ ಕ್ಷೇತ್ರಗಳೇ ಬೇರೆ ಬೇರೆ. ಸೌಕಟಿನವರ ಮುಖ್ಯವಾದ ಉದ್ದೇಶ ಚಿಕ್ಕವಯಸ್ಸಿನ ಮಕ್ಕಳಲ್ಲಿ ಗೂಢವಾಗಿರುವ ಗುಣಗಳನ್ನು ವಿಕಾಸಗೊಳಿಸಬೇಕೆಂಬುದು. ಅವರನ್ನು ತಯಾರು ಮಾಡುವುದೇ ಒಂದು ರೀತಿ. It is more or less of an educational character. ಇನ್ನು ಸೇವಾದಳ ತೆಗೆದುಕೊಂಡರೆ, ಅವರು ಕೈಕಸಬು ಮಾಡುವುದು, ಸಮಾಜಸೇವೆ ಮಾಡುವುದು, ಹಿಂದೆಯುದ್ದ ಪದ್ಧತಿಗಳನ್ನು ಪುನರ್ಜೀವನಗೊಳಿಸುವುದು ಅವರ ಕೆಲಸ. ಅವರು ಮಾಡುವುದು ಕಣ್ಣಿಗೆ ಕಾಣುತ್ತಿಲ್ಲ. ಅವರ ಕ್ಷೇತ್ರವೇ ಬೇರೆ. ಅವರು ಮಾಡುವ appeal ಕೂಡ ಬೇರೆ.

ಆಮೇಲೆ Adult Education Council ವಿಚಾರವನ್ನು ಆಗಲೇ ಹೇಳಿದ್ದಾರೆ. ಅಕ್ಷರಾಭ್ಯಾಸ ಮಾಡಿಸುವುದು ಮುಖ್ಯವಾದ ಕೆಲಸ. ಅದರ ಜೊತೆಗೆ ರೀಡಿಂಗ್ ರೂಮುಗಳನ್ನೇರ್ಪಡಿಸುವುದು, lantern slide ಉಪನ್ಯಾಸಗಳು, ಓದುವುದಕ್ಕೆ ಬಾರದೆ ಇದ್ದವರಿಗೂ ಜ್ಞಾನಕೊಡುವುದು—ಇವನೆಲ್ಲಾ ಇದು ಮಾಡುತ್ತಿದೆ. ಆದ್ದರಿಂದ ಒಬ್ಬರ ಕ್ಷೇತ್ರಕ್ಕೂ ಇನ್ನೊಬ್ಬರ ಕ್ಷೇತ್ರಕ್ಕೂ ಹೊಂದಾವಣಿಕೆಯಿರುವುದಿಲ್ಲ. ಆದ್ದರಿಂದ ಈಗಿರುವ ಸಂಸ್ಥೆಗಳನ್ನು ಒಂದುಗೂಡಿಸುವುದಕ್ಕಾಗುವುದಿಲ್ಲ. ಬೇಕಾದರೆ, ಆ ಎಲ್ಲ ಉದ್ದೇಶಗಳನ್ನೊಳಗೊಂಡ ಸಂಸ್ಥೆಯೊಂದನ್ನು ತಾವು ಬೇಕಾದರೆ ಮಾಡಿ. ಅದನ್ನು ಸರ್ಕಾರದವರು ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮಿತ್ರರು ಬೇಕಾದರೆ ಈ ಮೂರರ ಗುಣಗಳನ್ನೂ ಹೊಂದಿರುವ ಒಂದು ಸಂಸ್ಥೆಯನ್ನು ಏರ್ಪಾಡು ಮಾಡಲಿ. ಆಗಬೇಕಾದರೆ ಈ ಪ್ರಶ್ನೆಯನ್ನು serious ಆಗಿ ಯೋಚನೆ ಮಾಡಬಹುದು, ಈಗ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ.—ಸರ್ಕಾರದವರು ಸೂಕ್ತವಾದ ಕಾರ್ಯಕ್ರಮವನ್ನು ಕೈಕೊಳ್ಳುತ್ತೇವೆಂದು ಕೊಟ್ಟಿರುವ ಭರವಸೆಯಮೇರೆ ನಾನು ನನ್ನ ನಿರ್ಣಯವನ್ನು ವಾಪಸು ಪಡೆಯುತ್ತೇನೆ.

The resolution was, by leave, withdrawn.

Resolution No. 6. Construction of a General Hospital in Malleswaram.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸಭಾಧ್ಯಕ್ಷರೇ, ನನ್ನ ನಿರ್ಣಯ ಈ ರೀತಿ ಇದೆ:

"This Assembly is of the opinion that a General Hospital at a cost of about Three lakhs of Rupees be constructed in Malleswaram as there are many poor people and labourers in this northern extension of Bangalore (Malleswaram Area) and as the Victoria Hospital is far away and overcrowded."

2-30 P.M

ಈಗಿನ ಪರಿಸ್ಥಿತಿ ನೋಡಿದರೆ ಒಂದು ಕಡೆ ತುಂಬ ಸಂತೋಷವಾಗುತ್ತದೆ, ಮತ್ತೊಂದು ಕಡೆ ತುಂಬ ವ್ಯಸನವಾಗುತ್ತದೆ. ಇಂದು ಸರ್ಕಾರದಲ್ಲಿ ಜನತೆಗೆ ಎಷ್ಟರ ಮಟ್ಟಿಗೆ ವಿಶ್ವಾಸವಿದೆಯೆಂಬುದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ, ಎಲ್ಲರಿಗೂ ಗೊತ್ತಿದೆ, ಹೆಚ್ಚಾಗಿ ಜನರು ವಿಶ್ವಾಸವನ್ನಿಟ್ಟಿದ್ದಾರೆ. "ಬಲ್ಲವನೇ ಬಲ್ಲ ಬೆಲ್ಲದ ರುಚಿಯ" ಎಂಬ ಹಾಗೆ ಜನರಿಗೆ ಸರ್ಕಾರದ ವಿಷಯ ಚೆನ್ನಾಗಿ ತಿಳಿದಿದೆ, ಇದಕ್ಕೆ ಸಂತೋಷಪಡಬೇಕಾದ್ದು ಆವಶ್ಯಕ. ಸರ್ಕಾರದಲ್ಲಿ ಜನತೆಗೆ ಪ್ರೇಮವಿಲ್ಲವೆಂದು ಹೇಳಿದರೆ ನಾನು ಅಪರಾಧಿಯಾಗುತ್ತೇನೆ. "ನಡೆಯಂತೆ ನುಡಿ" ಎಂಬ ತತ್ವದ ಪ್ರಕಾರ ಜನರು ಕಾದು ನೋಡುತ್ತಿರುತ್ತಾರೆ. ಇದಲ್ಲದೆ ಬಡವರ ಕಾರ್ಯಕ್ರಮಗಳಲ್ಲಿ ಬಹಳವಾಗಿ ಸರ್ಕಾರದವರು ಕೀರ್ತಿಗಳಿಸಿದ್ದಾರೆಂದು ಹೇಳುವುದು ತುಂಬ ಸಂತೋಷಕರ. ಬೆಂಗಳೂರು ನಮ್ಮ ಸಂಸ್ಥಾನದಲ್ಲೇ ಅಲ್ಲದೆ ಪಾಶ್ಚಾತ್ಯ ದೇಶಗಳಲ್ಲೂ ಸಹ ಕೀರ್ತಿಗಳಿಸಿದೆ. ಇದು ಪ್ಯಾರಿಸ್ ಪಟ್ಟಣಕ್ಕೆ ಸರಿಸಮಾನವಾದ ನಗರ. ಅದಕ್ಕಾಗಿಯೇ ಮಾನ್ಯ ಸದಸ್ಯರನೇಕರು ರಜಾ ಸಿಕ್ಕಿದರೂ ಊರಿಗೆ ಹೋಗುವುದಿಲ್ಲ. ಏಕೆಂದರೆ ಇಲ್ಲಿನ ವಾತಾವರಣ ಹಾಗಿದೆ. ಆರೋಗ್ಯ ದೃಷ್ಟಿಯಿಂದ ಮತ್ತು ಇತರ ಸೌಕರ್ಯಗಳ ದೃಷ್ಟಿಯಿಂದ ಇಲ್ಲಿ ಒಂದು ಆಕರ್ಷಣೆಯಿದೆ. ಮಲ್ಲೇಶ್ವರದಲ್ಲಿ ಸಾಧಾರಣವಾಗಿ 60-70 ಸಾವಿರ ಜನಸಂಖ್ಯೆಯಿದೆ. ಅದರಲ್ಲಿ ಕಾರ್ಮಿಕರು, ಹರಿಜನರು, ಬಡವರು ಮುಂತಾದವರೇ ಹೆಚ್ಚಾಗಿದ್ದಾರೆ. ಆಸ್ಪತ್ರೆ ನಮ್ಮ ದೇಶದಲ್ಲಿ ತುಂಬಾ ಮುಖ್ಯವಾದುದಾಗಿದೆ. ಅನ್ನ ಆಹಾರ ಎಷ್ಟು ಅಗತ್ಯವೋ ಅದೇ ರೀತಿಯಲ್ಲಿ ವೈದ್ಯ ಸೌಕರ್ಯವೂ ತುಂಬ ಅಗತ್ಯ. ಆರೋಗ್ಯವಿದ್ದರೆ ಮನುಷ್ಯ ಏನು ಕೆಲಸ ಬೇಕಾದರೂ ಮಾಡಬಹುದು. ಇಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯು 1900 ನೆಯ ಇಸವಿಯಲ್ಲಿ ಕಟ್ಟಿದ್ದು. ಆಗ ಕೇವಲ 1-1½ ಲಕ್ಷ ಜನಸಂಖ್ಯೆ ಬೆಂಗಳೂರಿನಲ್ಲಿತ್ತು. ಈಗ ಅದು ಹೆಚ್ಚಿದೆ; ಹತ್ತು ಲಕ್ಷಕ್ಕೆ ಮೇಲ್ಪಟ್ಟು ಬೆಂಗಳೂರಿನ ಜನಸಂಖ್ಯೆಯಿದೆ. ಈಗಿನ ಜನಸಂಖ್ಯೆಗನುಸಾರವಾಗಿ ಹಿಂದೆ ಕಟ್ಟಿದ ಆಸ್ಪತ್ರೆಯಲ್ಲಿ ವಾರ್ಡು, ಬೆಡ್ಡುಗಳು ಇಲ್ಲ. ಅವು ಬಹಳ ಕಡಮೆಯಾಗಿವೆ. ಇರುವ ಜಾಗದಲ್ಲೇ ಹೆಚ್ಚು ಬೆಡ್ಡುಗಳನ್ನು ಹಾಕಬೇಕು. ಈ ದಿವಸ ವಿಕ್ಟೋರಿಯಾ ಆಸ್ಪತ್ರೆ ನೋಡಿದರೆ ಬಹಳ ವ್ಯಸನವಾಗುತ್ತದೆ. ಅದಕ್ಕೆ ಅಲ್ಲಿನ ಡಾಕ್ಟರುಗಳಾಗಲಿ ಕೆಲಸಗಾರರಾಗಲಿ ಅಪರಾಧಿಗಳಲ್ಲ. ಸ್ಥಳದ ಅಭಾವದಿಂದ ಬಹಳ ಕಷ್ಟವಾಗಿದೆ. ರೋಗಿಗಳ ಸಂಖ್ಯೆ ಹತ್ತರಷ್ಟು ಹೆಚ್ಚಿರುವಾಗ ಅದಕ್ಕೆ ಸರಿಸಮನಾದ ಸೌಕರ್ಯ ದೊರೆಯುತ್ತಿಲ್ಲ. ಜನಸಂಖ್ಯೆ ಹೆಚ್ಚಿ ಊರು ದೊಡ್ಡದಾಗುತ್ತಿರುವಾಗ ಆಸ್ಪತ್ರೆಗಳೂ ಹೆಚ್ಚಬೇಕಾದದ್ದು ಅಗತ್ಯ. ಆದ್ದರಿಂದ ಮಲ್ಲೇಶ್ವರದಲ್ಲಿ ಒಂದು ಜನರಲ್ ಆಸ್ಪತ್ರೆ ಸ್ಥಾಪಿಸಬೇಕು. ಸರ್ಕಾರ ಮನಸ್ಸು ಮಾಡಿದರೆ ಮಾಡುವುದೇನೂ ಅಗಾಧವಲ್ಲ.

(ಶ್ರೀ ವಿ. ಆರ್. ನಾಯ್ಡು.)

ಬೆಂಗಳೂರು ನಗರಕ್ಕೆ ಸಮೀಪದಲ್ಲಿರುವ ಮಲ್ಲೇಶ್ವರ ಕ್ಷೇತ್ರದಲ್ಲಿ 3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆಸ್ಪತ್ರೆ ಕಟ್ಟಿಸಬೇಕೆಂದು ಬಹಳ ವಿನಯದಿಂದ ಹಿಂದೆ ಬಹಳ ಕಾಲದಿಂದಲೂ ಪ್ರಾರ್ಥನೆ ಮಾಡುತ್ತಿದ್ದಾರೆ. ಅದರ ಆವಶ್ಯಕತೆ ಬಹಳವಾಗಿರುವುದು ಜವಾಬ್ದಾರಿಯುತರಾದ ಜನಪ್ರಿಯ ಸಚಿವರಿಗೆ ಮನವರಿಕೆಯಾಗಿರುವುದರಿಂದ ಸರ್ಕಾರದವರು ಜಾಗ್ರತೆ ಈ ಆಸ್ಪತ್ರೆಯನ್ನು ಕಟ್ಟಿಸಿ ಅಲ್ಲಿನ ಜನರಿಗೆ ಹತ್ತಿರದಲ್ಲಿ ಸೌಕರ್ಯ ಕಲ್ಪಿಸಿ ಕೀರ್ತಿ ಪಡೆಯುತ್ತಾರೆಂದು ನಂಬಿ ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೂ ಮತ್ತು ನನ್ನ ಭಾಷಣವನ್ನು ಶಾಂತ ಚಿತ್ತದಿಂದ ಕೇಳಿದ ಸಭಿಕರಿಗೂ ವಂದಿಸುತ್ತೇನೆ.

Mr. SPEAKER.—Motion moved:

"That this Assembly is of the opinion that a General Hospital at a cost of about three lakhs of rupees be constructed in Malleswaram as there are many poor people and labourers in the northern extension of Bangalore (Malleswaram area) and as the Victoria Hospital is far away and overcrowded."

***Sri B. T. KEMPA RAJ** (Bangalore South—Scheduled Castes).—Sir, in supporting the resolution I want to say a few words. It is a known fact that the population in Bangalore is increasing by leaps and bounds. As a result the present accommodation facilities in the existing hospitals is not at all sufficient, especially, the people of Malleswaram, Srirampuram and Yeswantpur are put to great difficulty and inconvenience for want of medical facilities in time of need. If a sick person has to be taken to a hospital, vehicles will not be easily available. Either the Corporation or the Hospitals are not in a position to provide the necessary Ambulance conveyance. As such, it would be very difficult for people residing in those localities to go to hospitals at great distance like Victoria for instance, and get the benefit of medical facilities. In several cases admission to Victoria Hospital will be rejected for want of accommodation. Therefore, it is very essential to have a general hospital at Malleswaram and Government should take up that work of constructing a general hospital in that locality at a cost of three lakhs of rupees.

Thank you.

Sri V. M. MASCARENHAS (St. John's Hill).—Mr. Speaker, one does not normally try to speak against the construction of a hospital. But, I am afraid the resolution as worded cannot be accepted; I have got to say a few words against it. In Bangalore a number of factories have come up. The resolution says that a general hospital should be constructed at Malleswaram for the benefit of labourers living in that locality. Sir, it is high time that the Government of Mysore should consider the question of asking all these factory owners to pool together and build a general hospital at a cost of ten lakhs for the benefit of labourers. I often see in hospitals like the Victoria, Bowring and other important hospitals in Bangalore, that more than 50 per cent of inpatients are members of these working concerns. These working concerns are minting lakhs of rupees profit and are declaring bonuses and dividends. There is no reason why good Mysore Government money should be spent on these labourers. It is but right that the concerns, who are making lakhs of rupees profit every year, should wake up and build up big hospitals for the benefit of their employees. It is being done all over Europe and America and the big industries in Bangalore should follow this example and thus help the Government to see that the hospitals that exist now are made use of only for the non-industrial population whose number is to the tune of 7 lakhs.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಸ್ವಾಮಿ, ಶ್ರೀಮಾನ್ ನಾಯ್ಡುರವರು ಈಗಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಾಕಾದಷ್ಟು ಸ್ಥಳವಿಲ್ಲದೆ ತೊಂದರೆ ಪಡುತ್ತಿದ್ದಾರೆ, ಅದಕ್ಕಾಗಿ ಮಲ್ಲೇಶ್ವರದ ಬಡಾವಣೆಯಲ್ಲಿ ಮಿಲ್ಲುಗಳಲ್ಲಿ ಕೆಲಸಮಾಡುವವರು ಮತ್ತು ಇನ್ನೂ ಅನೇಕ ಬಡ ಜನರು ಯಾರಿದ್ದಾರೋ ಅವರಿಗೆ ಅನುಕೂಲವಾಗುವಂತೆ ಒಂದು ದೊಡ್ಡ ಆಸ್ಪತ್ರೆಯನ್ನು ಸುಮಾರು ಮೂರು ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಕಟ್ಟಬೇಕೆಂದು ತಮ್ಮ ನಿರ್ಣಯದಲ್ಲಿ ಸೂಚನೆ ಮಾಡಿದ್ದಾರೆ. ನಾನು ಹಿಂದೆಯೇ ತಿಳಿಸಿದಹಾಗೆ, ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ವಾಣಿವಿಲಾಸ ಆಸ್ಪತ್ರೆ, ಎಸ್.ಡಿ.ಎಸ್. ಸ್ಯಾನಿಟೋರಿಯಂ, ಸಿವಿಲ್ ಸ್ಟೇಷನ್ನಿನಲ್ಲಿರುವ ಸ್ಯಾನಿಟೋರಿಯಂ, ಪೆಂಟಲ್ ಆಸ್ಪತ್ರೆ, ಸಿವಿಲ್ ಸ್ಟೇಷನ್ನಲ್ಲಿರುವ ಐಸೊಲೇಷನ್ ಆಸ್ಪತ್ರೆ, ಮಲ್ಲೇಶ್ವರದಲ್ಲಿರುವ ಹೆರಿಗೆ ಆಸ್ಪತ್ರೆ ಮುಂತಾದ ಮುಖ್ಯವಾದ ಆಸ್ಪತ್ರೆಗಳಿವೆ, ಇವಕ್ಕಾಗಿ ಈಗ ವೈದ್ಯ ಇಲಾಖೆ

ಗಾಗಿ ಸಂಸ್ಥಾನದಲ್ಲಿ ಖರ್ಚಾಗುವ ಹಣದಲ್ಲಿ ಬಹು ಭಾಗ ಖರ್ಚಾಗುತ್ತಿದೆ, ಇತರ ಡಿಸ್ಪೆನ್ಸರಿಗಳಲ್ಲಿ ಆಗುವ ಖರ್ಚಿನೊಂದಿಗೆ ಹೋಲಿಕೆ ಮಾಡಿದ ಪಕ್ಷದಲ್ಲಿ ಸಾಮಾನ್ಯವಾಗಿ ಇಲ್ಲೇಜಾಸ್ತಿ ಖರ್ಚಿದೆ, ಬಾಕಿ ಕಡೆ ಬಹಳ ಕಡಮೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತೊಂದು ಶ್ರೀ ನಾಯ್ಡುರವರು ಹೇಳಿದ ಹಾಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ, 700 ಮಂದಿಗಿಂತ ಹೆಚ್ಚು ರೋಗಿಗಳಿದ್ದಾರೆ. ಏಕೆಂದರೆ ಅಲ್ಲಿ ಸರ್ಕಾರದವರು ಬೇಕಾದಷ್ಟು ಅವಕಾಶ ಮಾಡಿದ್ದಾರೆ; ಎಕ್ಸ್‌ರೇ, ನರ್ಜಿಕಲ್ ಥಿಯೇಟರ್ಸ್, ಬ್ಲಡ್‌ಬ್ಯಾಂಕ್, ರಕ್ತ ಪರೀಕ್ಷೆಮಾಡುವ ಲ್ಯಾಬೊರೇಟರಿ ಹೀಗೆ ನಾನಾ ರೀತಿಯ ಸೌಕರ್ಯಗಳಿವೆ. ಅದು ಇಡೀ ಬೆಂಗಳೂರಿಗೆ ಒಂದು ಕೇಂದ್ರವಾಗಿ ಎಲ್ಲಾ ಸೌಕರ್ಯಗಳನ್ನೂ ಒಳಗೊಂಡಿದೆ. ಅದೇ ಮಟ್ಟದಲ್ಲಿ ಮಲ್ಲೇಶ್ವರದಲ್ಲೂ ಒಂದು ಆಸ್ಪತ್ರೆ ಕಟ್ಟಿಸಬೇಕಾದರೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಈಗ ಸರ್ಕಾರದಲ್ಲಿ ಹಣದ ಮುಗ್ಗಟ್ಟಿರುವಾಗ ಮೂರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕಟ್ಟಡ ಕಟ್ಟಿಸಬೇಕೆಂದು ಹೇಳುವುದು ಯುಕ್ತವಲ್ಲ. ಮೂರು ಲಕ್ಷ ಖರ್ಚುಮಾಡಿ ಆಸ್ಪತ್ರೆ ಕಟ್ಟಿಸಬಹುದು. ಆದರೆ ಖರ್ಚು ಅಷ್ಟಕ್ಕೇ ಮುಕ್ತಾಯವಾಗುವುದಿಲ್ಲ. ಪ್ರತಿ ವರ್ಷವೂ ಲಕ್ಷಾಂತರ ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಮೂರು ಲಕ್ಷ ರೂಪಾಯಿನಲ್ಲೇ ಎಲ್ಲಾ ಆಗುವುದಿಲ್ಲ. ಈಗ ಮಲ್ಲೇಶ್ವರದಲ್ಲಿ ಆಸ್ಪತ್ರೆಯನ್ನು ಸ್ಥಾಪಿಸಿ ನಡೆಸಬೇಕಾದರೆ ಹತ್ತು ಲಕ್ಷ ರೂಪಾಯಿಗಳಿಗೆ ಕಡಮೆಯಿಲ್ಲದಂತೆ ಬೇಕಾಗುತ್ತದೆ. ಈಗಾಗಲೆ ಮುಖ್ಯವಾದ ಸಂಸ್ಥೆಗಳಿಗೆ ಬೇಕಾದಷ್ಟು ಹಣ ಖರ್ಚು ಮಾಡುತ್ತಿರುವಾಗ ಮಲ್ಲೇಶ್ವರದಲ್ಲಿ ಆಸ್ಪತ್ರೆಗಾಗಿ ಹತ್ತು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಕೊಟ್ಟರೆ ಬಹಳ ಕಷ್ಟವಾಗುತ್ತದೆ ಮತ್ತು ಸರ್ಕಾರದ ಹಣದ ಅಭಾವದಿಂದ ಇದನ್ನು ತೆಗೆದುಕೊಂಡು ಮಾಡಲು ಸಾಧ್ಯವಾಗುವುದಿಲ್ಲ. ಮಲ್ಲೇಶ್ವರದಲ್ಲಿ ಆಸ್ಪತ್ರೆ ಸ್ಥಾಪಿಸುವ ವಿಷಯ ಫೋರ್ಸ್‌ವಾರ್ ಡೆವಲಪ್‌ಮೆಂಟ್ ಸ್ಕೀಮುಗಳಲ್ಲಿ 1947 ರಲ್ಲಿ ವಿಮರ್ಶೆ ಮಾಡಲ್ಪಟ್ಟಿತ್ತು. ಆಗ ಕೂಲಂಕಷವಾಗಿ ಯೋಚನೆ ಮಾಡಿ ಮಲ್ಲೇಶ್ವರದಲ್ಲಿ ಆಸ್ಪತ್ರೆ ಕಟ್ಟುವ ವಿಷಯ ಅಷ್ಟು ಸುಲಭವಲ್ಲ ಮತ್ತು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು. ಆದ್ದರಿಂದ ಸರ್ಕಾರದವರು ಅದನ್ನು ಕೈಬಿಟ್ಟರು. ಈಗಲೂ ಕೂಡ ಮಲ್ಲೇಶ್ವರದಲ್ಲಿ ಆಸ್ಪತ್ರೆ ಕಟ್ಟಬೇಕಾದರೆ ಕೊನೆಯಪಕ್ಷ ಹತ್ತು ಲಕ್ಷ ರೂಪಾಯಿಗಳಿಗೆ ಕಡಮೆಯಿಲ್ಲದಂತೆ ಖರ್ಚು ಮಾಡಬೇಕಾಗುತ್ತದೆ. ಶ್ರೀ ನಾಯ್ಡು ಅವರು ಮತ್ತು ಇತರರು ಹೇಳಿದಹಾಗೆ ಮಲ್ಲೇಶ್ವರದಲ್ಲಿ ಅನೇಕ ಬಡವರು, ಕೂಲಿಗಾರರು ಮುಂತಾದ ನಾನಾ ಜನರಿದ್ದಾರೆ; ಅವರಿಗೆ ಆಸ್ಪತ್ರೆಯಿಲ್ಲದೆ ತೊಂದರೆಯಿರಬಹುದು. ಆದರೆ ಇದು ಬಹಳ ಕಷ್ಟಕರವಾದ ವಿಷಯ. ಇದಲ್ಲದೆ ಬಸವನಗುಡಿಯ ಜನರು ಇದೇರೀತಿ ಜನರಲ್ ಆಸ್ಪತ್ರೆ ಕೊಡಿ ಎಂದು ಕೇಳಬಹುದು. ಪ್ರತಿಯೊಂದು ಬಡಾವಣೆಯವರೂ ಹೀಗೆಕೇಳುತ್ತಾ ಹೋದರೆ ಆಸ್ಪತ್ರೆಗಾಗಿ ಎಷ್ಟು ಖರ್ಚುಮಾಡಲು ಸಾಧ್ಯ? ಈಗ ವಿಕ್ಟೋರಿಯಾ ಆಸ್ಪತ್ರೆ ಬೆಂಗಳೂರಿಗೆ ಒಂದು ಸೆಂಟರ್. ಅಲ್ಲಿ ಬೇಕಾದ ಚಿಕಿತ್ಸೆ ನಡೆಯುತ್ತದೆ, ರೋಗಿಗಳಿಗೆ ಎಲ್ಲಾ ತರಹದ ಸೌಕರ್ಯಗಳೂ ಇವೆ. ಅದೇರೀತಿ ಮೈಸೂರಿನಲ್ಲಿ ಅಥವಾ ಬೆಂಗಳೂರಿನಲ್ಲಿ ಅಥವಾ ಇತರ ಎಕ್ಸ್‌ಜೆಷ್ಚೆಗಳಲ್ಲಿ ಆಸ್ಪತ್ರೆ ಸ್ಥಾಪಿಸಲು ಶಕ್ತಿಯಿಲ್ಲ. ಆದ್ದರಿಂದ ಮಲ್ಲೇಶ್ವರದಲ್ಲಿ ಜನರಲ್ ಆಸ್ಪತ್ರೆ ಕಟ್ಟುವ ವಿಷಯ ಸ್ವಲ್ಪ ಕಷ್ಟಕರವಾದುದು. ಹಣಕಾಸಿನ ಅಭಾವದಿಂದ ಈ ಕೆಲಸ ಮಾಡಲು ಸಾಧ್ಯವಿಲ್ಲದಿರುವುದರಿಂದ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಒಂದು ಸಲಹೆ. ಮಲ್ಲೇಶ್ವರದಿಂದ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಬರುವವರಿಗೆ ವಾಹನ ಸೌಕರ್ಯಕ್ಕೆ ಸರಿಯಾದ ಏರ್ಪಾಡು ಮಾಡಿದರೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಬಹುದು.

ಶ್ರೀ ಟಿ. ಚನ್ನಯ್ಯ.—ನೂರಾರು ಬಸ್ಸುಗಳು ಮಲ್ಲೇಶ್ವರದಿಂದ ಸಿಟಿ ಮಾರ್ಕೆಟ್ಟಿಗೆ ಓಡಾಡುತ್ತವೆ.

ಶ್ರೀ ಪಿ. ಆರ್. ರಾಮಯ್ಯ.—ಖಾಯಿಲೆಯವರಿಗೆ ಅಂಬುಲೆನ್ಸ್ ವ್ಯಾನ್ ಸೌಕರ್ಯ ಒದಗಿಸುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪಟ್ಟಣದಲ್ಲಿ ಎಲ್ಲರಿಗೂ ಕೊಟ್ಟರೆ ಹಳ್ಳಿಯವರೂ ಕೇಳಿದರೆ ಏನು ಮಾಡುವುದು?

ಶ್ರೀ ವಿ. ಆರ್. ನಾಯ್ಡು.—ದಯವಿಟ್ಟು ಮುಂದಿನ ವರ್ಷವಾದರೂ ಇದನ್ನು ತೆಗೆದುಕೊಳ್ಳಬೇಕು. ಈಗ ಒಂದು ನಣ್ಣ ಆಸ್ಪತ್ರೆಯಾದರೂ ಮಾಡಬೇಕು. ಹಾಗೆ ಮಾಡುತ್ತಾರೆಂಬ ಭರವಸೆಯಮೇಲೆ ನನ್ನ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಅಪ್ಪಣೆ ಬೇಡುತ್ತೇನೆ.

The resolution was, by leave, withdrawn.

Resolution No. 7. Construction of Railway Line between Chamarajanagar and Erode.

*ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ನನ್ನ ನಿರ್ಣಯ ಈ ರೀತಿಯಿದೆ; ಅದನ್ನು ಮಂಡಿಸುತ್ತೇನೆ.

> "ಚಾಮರಾಜನಗರ ಮತ್ತು ಕೊಯಮತ್ತೂರು ಡಿಸ್ಟ್ರಿಕ್ಟಿನ ಈರೋಡಿನ ಮಧ್ಯೆ ರೈಲ್ವೇ ಲೈನನ್ನು ಹಾಕುವ ಸಂಬಂಧದಲ್ಲಿ ಪ್ರಾರಂಭದ ಕೆಲಸಕಾರ್ಯಗಳು ಈಗಾಗಲೇ ನಡೆದಿರುವುದರಿಂದ ಆ ರೈಲ್ವೇ ಲೈನನ್ನು ಏರ್ಪಡಿಸುವುದನ್ನು ಸೇರಿಸಿಕೊಳ್ಳುವಂತೆ ಭಾರತ ಸರ್ಕಾರದವರಿಗೆ ಸಲಹೆಗಳನ್ನು ಕೊಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ".

ಸ್ವಾಮಿ, ಈ ನಿರ್ಣಯ ಕಳೆದ ಹತ್ತಾರು ವರ್ಷಗಳಿಂದಲೂ ಈ ಮಾನ್ಯ ಸಭೆಯ ಗಮನಕ್ಕೆ ಒಂದಿಲ್ಲ ಒಂದು ರೀತಿಯಲ್ಲಿ ಬರುತ್ತಲೇ ಇದೆ. ಇದಕ್ಕೆ ಸರ್ಕಾರದವರೂ ಕೂಡ ಕೊಯಮತ್ತೂರು ಜಿಲ್ಲೆಯಲ್ಲಿರತಕ್ಕ ಈರೋಡು ಸ್ಟೇಷನ್ನಿಗೂ, ಚಾಮರಾಜನಗರ ಸ್ಟೇಷನ್ನಿಗೂ ಮಧ್ಯೆ ಯಾವ ಸರ್ವೆ ಪರಿಶೀಲನೆ ಆಗಬೇಕಾಗಿದೆಯೋ ಅದನ್ನು ಎರಡು ಮೂರು ವರ್ಷದ ಹಿಂದೆಯೇ ನಡೆಸಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ಚಾಮರಾಜನಗರ-ಸತ್ಯಮಂಗಲ ರೈಲ್ವೇ ವಿಚಾರದಲ್ಲಿ ಈ ಸಭೆಯಲ್ಲಿಯೇ ಬಜೆಟ್ ಮೇಲೆ ಮಾತನಾಡುವಾಗ 'ಈ ರೈಲ್ವೇ ಲೈನನ್ನು ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತ ಮಾಡಬೇಕೆಂದು ಹೇಳಿ ಸೇರಿಸಿತ್ತು, ಆದರೂ ಕೂಡ ಅದು ಬಹುಶಃ ಅಲ್ಲಿನ ಪ್ರಯಾಣಿಕರ ಸಂಬಳ ಕಡಿಮೆ ಎಂಬ ಕಾರಣದಿಂದ ಆ ಲೈನನ್ನು